ಶ್ರೀ ಕೆ. ಕುಶಾಲ : ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರ ೩೦-ಬಿ ನಿರ್ದೇಶನವನ್ನು ರದ್ದು ಮಾಡಿ ಹೊಸ ನೇಮಕ ಮಾಡಬಹುದು ಎಂದು ಹೇಳಿ ಆದೇಶವನ್ನು ಕೊಟ್ಟಿದ್ದಾರೆಯೇ ? ಆದೇಶ ಕೊಟ್ಟಿದ್ದೇ ಆಗಿದ್ದರೆ ಅಪೆಕ್ಸ್ ಬ್ಯಾಂಕ್‌ನವರು ಸರ್ಕಾರದ ಆದೇಶವನ್ನು ಇಲ್ಲಿ ಪರಿಶೀಲಿಸಿಲ್ಲವೇ ?

ಅಧ್ಯಕ್ಷರು : ೩೦-ಬಿ ನಿರ್ದೇಶನ ಆಧಾರ ಪ್ರಕಾರ ಆದೇಶವನ್ನು ಕೊಟ್ಟಿದ್ದಾರೆಯೇ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ : ನಾನು ಆಗಲೇ ಹೇಳಿದೆ; ಈಗ ನಿರ್ದೇಶನವನ್ನು ಕೊಟ್ಟಿದ್ದೇವೆ. ಆ ರೀತಿ ಕೊಟ್ಟಮೇಲೆ ವಿಚಾರ ಮಾಡುತ್ತೇವೆ ಎಂದು ಹೇಳಿದ್ದಾರೆ. ಸರ್ಕಾರದವರು ಅದನ್ನು ಪರಿಶೀಲನೆ ಮಾಡಿ ನೋಡಲಿಕ್ಕೆ ಹತ್ತಿದ್ದಾರೆ.

ವಿಷಯ : ಜವಹಾರ್ ರೋಜ್ಗಾರ್ ಯೋಜನೆಯಡಿಯಲ್ಲಿ ಮಂಜೂರಾಗಿರುವ ಹಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೫೯ (೭೦೯)

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜವಾಹರ ರೋಜಗಾರ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯಕ್ಕೆ ಮಂಜೂರಾಗಿರುವ ಒಟ್ಟು ಮೊತ್ತವೆಷ್ಟು ?

ಆ) ಇದರಲ್ಲಿ ಹಣದ ರೂಪದಲ್ಲಿ ನೀಡುವ ಭಾಗ ಮತ್ತು ಆಹಾರ ಧಾನ್ಯಗಳ ರೂಪದಲ್ಲಿ ನೀಡುವ ಭಾಗವೆಷ್ಟು ?

ಇ) ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಭಾಗವೆಷ್ಟು ?

ಈ) ಜವಾಹರ ರೋಜಗಾರ ಯೋಜನೆಯಡಿಯಲ್ಲಿ ಇದುವರೆವಿಗೂ ಖರ್ಚಾಗಿರುವ ಹಣ ಎಷ್ಟು ?

ಉ) ಉಳಿದಿರುವ ಹಣವನ್ನು ಖರ್ಚು ಮಾಡಲು ರಾಜ್ಯ ಸರ್ಕಾರವು ಯಾವುದಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರು) : ಅ) ೨೦೦೫-೦೬ ಲಕ್ಷ ರೂಪಾಯಿಗಳು

ಆ) ಪ್ರಸಕ್ತ ಸಾಲಿನಿಂದ ಪರಿಷ್ಕೃತ ನಿಯಮಗಳಂತೆ ಅನುದಾನವನ್ನು ಹಣದ ರೂಪದಲ್ಲಿ ನೀಡಿದ್ದು ಆಹಾರ ಧಾನ್ಯಗಳ ಪ್ರಮಾಣವನ್ನು ಕೇಂದ್ರ ಸರ್ಕಾರವು ಜಿಲ್ಲೆಗಳಿಗೆ ನಿಗದಿಪಡಿಸಿದ್ದು ಬೇಡಿಕೆಗೆ ಅನುಸಾರವಾಗಿ ಅನುದಾನದ ಹಣದಲ್ಲಿಯೇ ನೇರವಾಗಿ ಭಾರತ ಆಹಾರ ನಿಗಮದ ಪಾವತಿ ಮಾಡಿ ಪಡೆಯಬಹುದಾಗಿದೆ. ರಾಜ್ಯಕ್ಕೆ ಒಟ್ಟು ಅಂದಾಜು ೭೦. ಟಿ. ಅಕ್ಕಿಯನ್ನು ನಿಗದಿ ಮಾಡಲಾಗಿದೆ.

ಇ) (ರೂ. ಲಕ್ಷಗಳಲ್ಲಿ)
ರಾಜ್ಯದ ಭಾಗ
ರೂ. ೨೪೧೧.೭೪

(ರೂ. ಲಕ್ಷಗಳಲ್ಲಿ)
ಕೇಂದ್ರ ಸರ್ಕಾರದ ಭಾಗ
ರೂ. ೯೬೬೭.೨೬

ಈ) ರೂ. ೫೬೦೭.೫೭೭ ಲಕ್ಷಗಳು.

ಉ) ಉಳಿದಿರುವ ಹಣವನ್ನು ಮಾರ್ಚ್ ೧೯೯೧ರ ಅಂತ್ಯದೊಳಗೆ ಖರ್ಚು ಮಾಡಲು ಎಲ್ಲಾ ಮುಖ್ಯ ಕಾರ್ಯದರ್ಶಿಗಳು ಜಿಲ್ಲಾ ಪರಿಷತ್ ಅವರುಗಳಿಗೆ ಸೂಚಿಸಲಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಉತ್ತರ 'ಅ'ದಲ್ಲಿ "ಪ್ರಸಕ್ತ ಸಾಲಿನಿಂದ ಪರಿಷ್ಕೃತ ನಿಯಮಗಳಂತೆ ಅನುದಾನವನ್ನು ಹಣದ ರೂಪದಲ್ಲಿ ನೀಡಿದ್ದು ಆಹಾರ ಧಾನ್ಯಗಳ ಪ್ರಮಾಣವನ್ನು ಕೇಂದ್ರ ಸರ್ಕಾರವು ಜಿಲ್ಲೆಗಳಿಗೆ ನಿಗದಿಪಡಿಸಿದ್ದು ಬೇಡಿಕೆಗೆ ಅನುಸಾರವಾಗಿ ಅನುದಾನದ ಹಣದಲ್ಲಿಯೇ ನೇರವಾಗಿ ಭಾರತ ಆಹಾರ ನಿಗಮಕ್ಕೆ ಪಾವತಿ ಮಾಡಿ ಪಡೆಯಬಹುದಾಗಿದೆ" ಎಂದು ತಿಳಿಸಿದ್ದಾರೆ. ಈ ಒಂದು ಪ್ರಸಕ್ತ ಸಾಲಿನಿಂದ ಏನು ಪರಿಷ್ಕೃತ ನಿಯಮ ಬಂದಿದೆ ಈ ನಿಯಮದಿಂದ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಒದಗಿಸಿದ ಹಣದಲ್ಲಿ ಆಹಾರ ಧಾನ್ಯಗಳ ಬಳಕೆಯನ್ನು ಕಡ್ಡಾಯ ಮಾಡದೇ ಇದ್ದರೆ, ಇದರಿಂದ ಕೂಲಿ ಕಾರ್ಮಿಕರಿಗೆ ಬಹಳಷ್ಟು ಅನ್ಯಾಯವಾಗುತ್ತದೆ. ಮೊದಲಿಗೆ ಏನಾಗುತ್ತಿತ್ತು ಎಂದರೆ. ಎರಡು ರೂಪಾಯಿಗೆ ಒಂದು ಕೆ ಜಿ. ಅಕ್ಕಿಯನ್ನು ಕೊಡುತ್ತಿದ್ದರು. ಈಗ ಹಣವನ್ನು ಕೊಡುತ್ತಾರೆ. ಇದರಿಂದ ಕೂಲಿ ಕಾರ್ಮಿಕರುಗಳು ಆಹಾರಧಾನ್ಯಗಳಿಂದ ವಂಚಿತರಾಗಿದ್ದಾರೆ. ಇದರ ಜೊತೆಗೆ ಕಾರ್ಪೋರೇಷನ್‌ನವರು ರಾಜ್ಯಕ್ಕೆ ೨೫೫.೫೧ ಮೆಟ್ರಿಕ್ ಟನ್ ಅಕ್ಕಿಯನ್ನು ಕೊಟ್ಟಿದ್ದಾರೆ ಇದರ ಬಳಕೆ ಆಗುವದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ರಾಜ್ಯಕ್ಕೆ ಒಟ್ಟು ೨೫೫.೫೧ ಮೆಟ್ರಿಕ್ ಟನ್ ಅಕ್ಕಿ ಬಳಕೆ ಆಗುವದಿಲ್ಲ. ಗೋಡಾನ್‌ನಲ್ಲಿಯೇ ಕೊಳೆತು ಹೋಗುತ್ತಿದೆ. ಕೊನೆಯ ಪಕ್ಷ ಮೊದಲು ಏನು ಶೇಕಡ ೫೫ ರಷ್ಟು ಆಹಾರ ಧಾನ್ಯ ಬಳಕೆ ಕಡ್ಡಾಯ ಇತ್ತು, ಆ ಆಹಾರ ಧಾನ್ಯಗಳ ಬಳಕೆಯನ್ನು ಈ ಕಾಮಗಾರಿಗಳಿಗೆ ಖರ್ಚು ಮಾಡುತ್ತೀರಾ ಎನ್ನುವ ಬಗ್ಗೆ ಕೇಳುತ್ತೇನೆ.

ಶ್ರೀ ಬಿ ಬಸವಲಿಂಗಪ್ಪ : ಮಾನ್ಯ ಸದಸ್ಯರು ಕೊಟ್ಟ ಸಲಹೆ ಒಳ್ಳೆಯ ಸಲಹೆಯಾಗಿದೆ. ಅದನ್ನು ಸರ್ಕಾರ ಪರಿಶೀಲಿಸುತ್ತದೆ

ಶ್ರೀ ಬಸವರಾಜ ರಾಯರೆಡ್ಡಿ : ಈ ಉತ್ತರದಲ್ಲಿ ಒಟ್ಟು ಜವಾಹರ್ ರೋಜಗಾರ ಯೋಜನೆಯಲ್ಲಿ ರಾಜ್ಯಕ್ಕೆ ೧೭೦೫೯.೭೦ ಲಕ್ಷ ರೂಪಾಯಿಯನ್ನು ಈ ವರ್ಷ ನಿಗದಿಪಡಿಸಿದ್ದಾರೆ. ಆದರೆ ಇದುವರೆಗೂ ಇದರಲ್ಲಿ ಒಟ್ಟು ಖರ್ಚಾದ ಹಣ ಕೇವಲ ೫೫೦೭ ಲಕ್ಷ ರೂಪಾಯಿಗಳು. ಇದರಿಂದ ಇನ್ನು ೮೫೪೭ ಲಕ್ಷ ರೂಪಾಯಿಗಳು ಖರ್ಚಾಗಿಲ್ಲ. ಈ ಯೋಜನೆಯಲ್ಲಿ ಒದಗಿಸಿರುವ ಹಣದಲ್ಲಿ ಶೇಕಡ ೫೫

ರಷ್ಟು ೯ ತಿಂಗಳಲ್ಲಿ ಖರ್ಚಾಗಿದೆ. ಇನ್ನು ಮೂರು ತಿಂಗಳಲ್ಲಿ ಉಳಿದ ಶೇಕಡ ೫೫ ರಷ್ಟು ಭಾಗ ಹಣವನ್ನು ಖರ್ಚು ಮಾಡಲಿಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಇವರು ಉತ್ತರದಲ್ಲಿ ಜಿಲ್ಲಾ ಪರಿಷತ್ತಿನವರಿಗೆ ಖರ್ಚು ಮಾಡಲು ಸೂಚಿಸಿದ್ದೇವೆಂದು ಹೇಳಿದ್ದಾರೆ. ಹೋದ ವರ್ಷ ಕೊಡ ಇವರಿಗೆ ಕೊಟ್ಟಂತಹ ಹಣದಲ್ಲಿ ಸುಮಾರು ಶೇಕಡ ೫೦ ರಷ್ಟು ಹಣ ಖರ್ಚಾಗದೆ ಉಳಿದಿದೆ. ಇದರಿಂದ ಇಲ್ಲಿ ಏನು ಸಮಸ್ಯೆ ಇದೆ ಎಂದರೆ ಮಂಡಲ್ ಒನ್ ಅಕೌಂಟಿಗೆ ರೋಜಗಾರ ಯೋಜನೆಯಿಂದ ನೇರವಾಗಿ ಹಣ ಕೊಟ್ಟುಬಿಡುತ್ತೀರಿ. ಕೆಲವು ಸದಸ್ಯರು ಸೇರಿ ಕೆಲವು ಯೋಜನೆಗಳನ್ನು ರೂಪಿಸಿ ತಕ್ಷಣ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ಮತ್ತೊಂದು ಸಾರಿ ಎಕ್ಸ್‌ಪೆನ್ಷನ್ ಮಾಡುತ್ತಾರೆ. ಕೆಲವು ಜಮೀನುಗಳಲ್ಲಿ ರಸ್ತೆ ಮಾಡಲಿಕ್ಕೆ ಹೋಗುತ್ತಾರೆ. ಹೀಗಾಗಿ ಅಲ್ಲಿ ಜಮೀನುಗಳ ಮಾಲೀಕರ ಅಥವಾ ಇನ್ನಿತರ ತಂಟೆಗಳು ಬಂದು ಕೆಲಸ ಕಾಮಗಾರಿಗಳು ನಿಂತು ಹೋಗಿವೆ. ಮಂಡಲ್ ಒನ್ ನಿಂದ ಮಂಡಲ್ ಟು ಗೆ ವರ್ಗಾವಣೆ ಮಾಡಿ ಬೇಕಾದರೆ ಪ್ಲಾನ್ ಮಾತ್ರ ಮಂಡಲ ಪಂಚಾಯತ ಮಾಡಲಿ. ಮಂಡಲ ಟು ಅಕೌಂಟಿಗೆ ವರ್ಗಾವಣೆ ಮಾಡಿದರೆ ಜಿಚ್ಚಿನ ಹಣವನ್ನು ಖರ್ಚ ಮಾಡಲು ಸಾಧ್ಯ ಇದೆ. ಇದರ ಬಗ್ಗೆ ಮಂಡಲ್ ಒನ್ ಅಕೌಂಟ್‌ನಿಂದ ಮಂಡಲ್ ಟು ಅಕೌಂಟಿಗೆ ಸರ್ಕಾರ ಕೊಡುವುದಕ್ಕೆ ಏನಾದರೂ ಯೋಜನೆ ಮಾಡಿದೆಯೋ ಎನ್ನುವ ಒಗ್ಗೆ ಸಚಿವರು ತಿಳಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಇರತಕ್ಕ ನಿಬಂಧನೆಗಳ ಪ್ರಕಾರ ನೇರವಾಗಿ ಪಂಚಾಯತ್‌ಗಳಿಗೆ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ನ್ಯೂನ್ಯತೆಗಳ ಬಗ್ಗೆ ಹೇಳಿದ್ದಾರೆ. ಈ ನ್ಯೂನ್ಯತೆಗಳು ಸಹಜವಾಗಿವೆ. ನಾವು ನ್ಯೂನ್ಯತೆಯನ್ನು ಪರಿಶೀಲಿಸಬೇಕೆಂದು ತನಿಖೆ ಸಮಿತಿಯನ್ನು ನೇಮಿಸಿದ್ದೇವೆ ಅದರ ವರದಿ ಬಂದಿದೆ. ತಾವು ಹೇಳಿದ ಪ್ರಕಾರ ಶೇಕಡ ೫೫ ರಷ್ಟು ಮಾತ್ರ ಖರ್ಚಾಗಿದೆ. ಉಳಿದ ಹಣ ಹಾಗೆಯೇ ಉಳಿದಿದೆ. ಜನರಿಗೆ ಸಿಗುವಂತಹ ಸೌಲಭ್ಯಗಳು ಏನಿವೆ ಅವು ಫಲಾನುಭವಿಗಳಿಗೆ ನೇರವಾಗಿ ಸರಿಯಾಗಿ ಸಿಗುತ್ತಿಲ್ಲ. ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಬದಲಾವಣೆ ಆಗತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ಸಮಗ್ರವಾದ ತಿದ್ದುಪಡಿ ನಾಳೆ ಬರುತ್ತದೆಯಲ್ಲಾ....

ಶ್ರೀ ಬಸವರಾಜ ರಾಯರೆಡ್ಡಿ : ತಿದ್ದುಪಡಿ ತರುವುದಿಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಜವಾಹರ್ ರೋಜ್‌ಗಾರ್ ಯೋಜನೆಯ ಬಗ್ಗೆ ಉತ್ತರ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲೂ ಇದು ಒಂದು ದೊಡ್ಡ ತಮಾಷೆಯಾಗಿದೆ. ಇಡೀ ದೇಶದಲ್ಲಲ್ಲ, ಎಲ್ಲಾ ರಾಜ್ಯ ಸರ್ಕಾರಗಳಲ್ಲಿಯೂ, ಕೇಂದ್ರ ಸರ್ಕಾರದಲ್ಲಿಯೂ ಇದೇ ತಮಾಷೆಯಾಗಿ ನಡೆಯುತ್ತಿರಬಹುದು. ಜವಾಹರ್ ರೋಜ್‌ಗಾರ್ ಯೋಜನೆಯ ಪ್ರಕಾರ ತಾವು ಕೊಟ್ಟಿರ ತಕ್ಕ ಅಂಕಿಅಂಶಗಳು ೯ ತಿಂಗಳು ಕೆಲಸ ಮಾಡಿ ೩೬ ಕೋಟಿ ಖರ್ಚು ಮಾಡಿದ್ದಾರೆ.

ಇನ್ನು ಆಳ ಕೋಟಿ ರೂಪಾಯಿ ಉಳಿದಿದೆ. ಆಳ ಕೋಟಿ ರೂಪಾಯಿಯನ್ನು ಮಾರ್ಚ ೩೧ ರೊಳಗೆ ಖರ್ಚು ಮಾಡುವುದಕ್ಕೆ ತಿಳಿಸಿದ್ದೀವೆಂದು ಹೇಳಿದ್ದಾರೆ. ಎಲ್ಲ ಕಡೆಯೂ ಇದೇ ಆಗುತ್ತಿರುವುದು. ಇದೊಂದೇ ಯೋಜನೆಯಲ್ಲಿ ಹೀಗೆ ಆಗಿಲ್ಲ, ಎಲ್ಲಾ ಇಲಾಖೆಯಲ್ಲಿಯೂ ಇದೇ ರೀತಿ ಆಗಿದೆ. ನಾನು ಹೋದ ವರ್ಷ ಫೆಬ್ರವರಿ ೨೮ ರಂದು ಆಯ್ಕೆಯಾಗಿ, ನಾನು ಮಾರ್ಚ ಮೊದಲ ವಾರದಲ್ಲಿ ಮೊದಲು ತಾಲ್ಲೂಕು, ಪಂಚಾಯತ್ ಸಭೆಗೆ ಅಧ್ಯಕ್ಷತೆ ವಹಿಸಿದ್ದೆ. ಈ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಡಿಸೆಂಬರ ೩೧ ರ ವರಗೆ ಅರ್ಧ ಹಣ ಖರ್ಚಾಗಿತ್ತು. ನಂತರ ಮಾರ್ಚ ಮೊದಲ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದಾಗ ಉಳಿದ ಪೂರ್ತಿ ಹಣ ಖರ್ಚಾಗಿತ್ತು. ತಾವು ಈಗಲೂ ಎಚ್ಚರಿಕೆ ವಹಿಸದಿದ್ದರೆ ಆಳ ಕೋಟಿ ರೂಪಾಯಿ ಹಣ ಇನ್ನು ಮೂರು ತಿಂಗಳಲ್ಲಿ ಖರ್ಚಾಗುತ್ತದೆ. ಹಣ ಹೇಗೆ ಖರ್ಚು ಮಾಡುತ್ತಾರೆ ಎಂದು ತಮಗೆ ಗೊತ್ತಿದೆ. ಅದು ಕಾಗದದ ಮೇಲೆ ಖರ್ಚಾಗುತ್ತದೆ. ಆ ಕಾರಣಕ್ಕಾಗಿ ನಾನು ಸಲಹೆ ಮಾಡುವುದು ಏನೆಂದರೆ, ಈ ತರಹ ಆಗತಕ್ಕದ್ದು ನಿಮ್ಮ ಒಂದು ಇಲಾಖೆಯಲ್ಲಿಯೇ ಅಲ್ಲ. ಆದ್ದರಿಂದ ಎಲ್ಲಾ ಇಲಾಖೆಯಿಂದಲೂ ಈ ಬಗ್ಗೆ ಕ್ವಾರ್ಟರ್‌ಲಿ ಪರ್‌ಫಾರ್‌ಮನ್ಸ್ ರಿಪೋರ್ಟ್ ತರಿಸಿಕೊಳ್ಳುವಂಥ ಒಂದು ಕಡ್ಡಾಯ ನಿಯಮವನ್ನು ಮಾಡುತ್ತೀರಾ ? ಮೂರು ತಿಂಗಳಿಗೆ ಕಾಲುಭಾಗ ಹಣ ಖರ್ಚಾಗಿರಬೇಕು, ಅದೇ ರೀತಿ ಕಾಲು ಭಾಗ ಕೆಲಸ ಆಗಿರಬೇಕು. ಇಲ್ಲ ಅಧಿಕಾರಿಗಳನ್ನು ವಜಾ ಮಾಡಬೇಕು. ಈ ಕೆಲಸವನ್ನು ತಾವು ದಯವಿಟ್ಟು ಮಾಡಿ. ಈ ಬಗ್ಗೆ ತಾವು ಎಚ್ಚರ ವಹಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವ್ಯಕ್ತ ಪಡಿಸಿರತಕ್ಕಂಥ ಅಭಿಪ್ರಾಯ ಸಹಜವಾಗಿರತಕ್ಕದ್ದೆ. ವರ್ಷಂಪ್ರತಿ ಹೀಗೇ ರೀತಿ ನಡೆದು ಕೊಂಡು ಬಂದಿದೆ. ಮಾನ್ಯ ಸದಸ್ಯರು ಈ ರೀತಿ ಎಲ್ಲಾ ಇಲಾಖೆಯಲ್ಲೂ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಅದು ನಮ್ಮೆಲ್ಲರ ಗಮನಕ್ಕೂ ಬಂದಿದೆ. ಈ ರೋಜ್‌ಗಾರ್ ಯೋಜನೆ ಏನಿದೆ ಅದು ನೇರವಾಗಿ ಕೇಂದ್ರ ಸರ್ಕಾರದಿಂದ ಕಳುಹಿಸತಕ್ಕ ಹಣ. ಆ ಹಣದಲ್ಲಿ ಎಷ್ಟು ಭಾಗ ಜನಗಳು ಆಸಕ್ತಿ ವಹಿಸಿ ಕೆಲಸ ಮಾಡುತ್ತಾರೆ ಎನ್ನುವುದು ಅರ್ಥವಾಗುತ್ತಿದೆ. ಈಗ ತಾವು ಕ್ವಾರ್ಟರ್‌ಲಿ ಸ್ಟೇಟ್‌ಮೆಂಟ್ ಖರ್ಚು ಮಾಡಿರತಕ್ಕದ್ದು ತರಿಸಿಕೊಳ್ಳಬೇಕೆಂದು ಹೇಳಿದ್ದೀರಿ. ಹಾಗೆಯೇ ಅದನ್ನು ಮುಂದಕ್ಕೆ ರೂಢಿಸಿಕೊಳ್ಳಬೇಕೆಂದು ಹೇಳಿದ್ದೀರಿ, ಅದನ್ನು ಕಾರ್ಯಗತ ಮಾಡಬೇಕೆಂದು ತಾವು ಏನು ಸಲಹೆ ಕೊಟ್ಟಿದ್ದೀರಿ, ಅದು ಉತ್ತಮವಾದ ಸಲಹೆ. ಈ ರೋಜ್‌ಗಾರ್ ಯೋಜನೆಯಾಗಲಿ ಮತ್ತು ಈ ರೂರಲ್ ಡೆವಲಪ್‌ಮೆಂಟ್ ಇಲಾಖೆ ಏನಿದೆ ಅದರಲ್ಲಿಯೂ ಸಹ ತಮ್ಮ ಸಲಹೆಯನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಬಿ. ಹೆಚ್. ಯಂಕಾನಾಯಕ್ ಅವರ ಪ್ರಶ್ನೆ ೭೭೬ ರೆವಿನ್ಯೂ ಇಲಾಖೆಗೆ ವರ್ಗ ಮಾಡಲಾಗಿದೆ. ರೆವಿನ್ಯೂ ಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೋತ್ತರಗಳು ಬಂದಾಗ ಮಾನ್ಯ ಸದಸ್ಯರು ಪ್ರಶ್ನೆ ಕೇಳಬಹುದು.